ಅಂಚಿಗೂ ಚಾಚುವುದರಿಂದ ಬಿಳಿ ಬಣ್ಣದ ಪಕಳೆಗಳ ಮೇಲೆ ಹಳದಿ ಬಣ್ಣದ ತೇಪೆ ಒಂದು ಸುಂದರ ಚಿತ್ರ ಬಿಡಿಸಿದಂತೆ ಕಾಣುತ್ತದೆ. ಇವತ್ತಿಗೂ ಈ ಹೂವು ಯಾವುದೆಂದು ಗೊತ್ತಿಲ್ಲ. ಮನೆಯಂಗಳದ ಈ ಮಳೆಗಾಲದ ಚೆಲುವೆಗೆ ಬೇರೆ ಹೆಸರು ಬೇಕೆಂದೂ ಅನಿಸುವುದಿಲ್ಲ.

ಜೋರು ಮಳೆ ಹೊಯ್ಯುತ್ತಿತ್ತು. ಅಂಗಳದ ತುಂಬ ನೀರು ಹರಿಯುತ್ತಿತ್ತು. ಅಲ್ಲೇ ಗೊಬ್ಬರದ ಹುಳುವೊಂದು ಆಕಸ್ಮಿಕವಾಗಿ ಬಂದ ಜೋರಾದ ಮಳೆಗೆ ತೊಪ್ಪೆಯಾಗಿ ಮನೆ ಸೇರಿಕೊಳ್ಳಲು ಓಡುವವನ ಹಾಗೆ ಸುರಕ್ಷಿತ ತಾಣದ ಹುಡುಕಾಟದಲ್ಲಿತ್ತು. ಅರೆರೆ! ಇದನ್ನು ನೋಡಿ ಎಷ್ಟು ವರ್ಷವಾಗಿತ್ತು. ನಾವೆಲ್ಲ ಉಂಡೆಯಾಟ ಆಡುತ್ತಿದ್ದುದು ಇದೇ ಹುಳುವಲ್ಲವೇ ಎನಿಸಿ ಒಮ್ಮೆ ಮುಟ್ಟಿದೆ. ಒಮ್ಮೆಲೇ ಮುದುರಿಕೊಂಡು ಆಟದ ಗುಂಡಿನಂತಾಯ್ತು. ಕೈಯಲ್ಲಿ ಹಿಡಿದು ಆಡಿಸಿದೆ. ನನ್ನ ಕೈಯ ಬಿಸಿ ತಾಗುವವರೆಗೂ ಆ ಹುಳು ಬಿಚ್ಚಿಕೊಳ್ಳಲಿಲ್ಲ. ತನ್ನ ಇರುವನ್ನೇ ಪ್ರಕಟಗೊಳಿಸದೇ ನಿರ್ಜೀವ ಕಲ್ಲಿನಂತಿತ್ತು. ಅದನ್ನು ನೆಲದ ಮೇಲೆ ಉರುಳಿಸಿ ಸುಮ್ಮನೇ ನೋಡುತ್ತ ನಿಂತೆ. ಕೆಲವೇ ಕ್ಷಣಗಳಲ್ಲಿ ತನ್ನ ಸಹಸ್ರಾರು ಕಾಲುಗಳನ್ನು ನಿಧಾನವಾಗಿ ಬಿಚ್ಚಿಕೊಳ್ಳುತ್ತ ಯಾರಿದ್ದಾರೋ ಎಂದು ಹಣಕಿ ನೋಡಿತು. ತನ್ನ ದಾರಿಗೆ ಅಡ್ಡ ಬರುವ ಶತ್ರುಗಳು ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡ ಮೇಲೆಯೇ ನಿಧಾನವಾಗಿ ಸಹಸ್ರಾರು ಕಾಲುಗಳನ್ನು ಬಿಚ್ಚಿಕೊಂಡು ಆ ಮಳೆಯ ನಡುವೆಯೇ ಅಡಗಲು ಸುರಕ್ಷಿತ ಜಾಗ ಅರಸಿ ಸವಾರಿ ಹೊರಟಿತು. ಈ ಗೊಬ್ಬರದ ಹುಳುವಂತಹ ಅಪರೂಪದ ಕೀಟಗಳು ಇನ್ನೂ ಜೀವಂತ ಇವೆಯೆಂದರೆ ಇಲ್ಲಿಯ ಪರಿಸರವಿನ್ನೂ ಜೀವಂತವಾಗಿದೆ ಎಂದು ಸಮಾಧಾನವಾಯ್ತು.

## ಗೋವಿನ ಮುಖದ ಕೆಸು

ಗೋವಿನ ಮುಖದ ಹೂವಿನ ಹಾಗೆ ಮಳೆಗಾಲದಲ್ಲಿ ಮಾತ್ರ ಚಿಗುರುವ ಸಸ್ಯಗಳ ಪ್ರಭೇದಗಳಲ್ಲಿ ಕೆಸುವೂ ಒಂದು. ಅದರಲ್ಲೂ ಮಲೆನಾಡಲ್ಲಿ ಕೆಲವೇ ಮರದ ಪೊಟರೆಗಳಲ್ಲಿ ಮಳೆ ಬಂದಾಗ ಮರಗೆಸು ಚಿಗುರುತ್ತದೆ. ಆಗ ಮನೆಗಳಲ್ಲಿ ಪತ್ರೊಡೆಯ ಸಮಯ. ಎಷ್ಟೋ ಸಲ ಈ ಕೆಸುವಿನ ಗಡ್ಡೆಗಳನ್ನು ತಂದು ಮನೆಯಂಗಳದ ಮರದ ಪೊಟರೆಗಳಲ್ಲಿ ಇರಿಸಿದ್ದೇನೆ. ನಾವು ಬಯಸಿದಾಗ ಅವು ಚಿಗುರಿದ್ದು ಅಪರೂಪ. ಆದರೆ ಈ ಬಾರಿ ಅಂಗಳದ



ಗೋವಿನ ಮುಖದ ಹೂವು



ಇಡ್ಲಿಗಳಂತಿರುವ ಅಣಬೆಗಳು

ಮೂಲೆಯ ಮರವೊಂದರಲ್ಲಿ ಮರಗೆಸು ಚಿಗುರಿದ್ದ ಕಂಡೆ. ನಗರದ ಬೀಳು ಭೂಮಿಗಳಲ್ಲಿ ಗುಂಪಾಗಿ ಬೆಳೆಯುವ ಕಳೆಯಾದ ಕೆಸುಗಳಿಗೆ ಈ ಮರಗೆಸುವನ್ನು ಹೋಲಿಸುವಂತೆಯೇ ಇಲ್ಲ. ಮರಗೆಸುವಿನ ಎಲೆಗಳು ದಪ್ಪ, ದಷ್ಟಪುಷ್ಟ. ಅದಿಲ್ಲದೇ ಅವು ಚಿಗುರುವುದೇ ಇಲ್ಲ. ಹಸಿರು ಎಲೆಗಳ ಮೇಲೆ ನಕಾಶೆ ಬಿಡಿಸಿದ ಹಾಗೆ ದಂಟುಗಳು. ಈ ಕೆಸುಗಳ ಚಂದ ಹಾಗೂ ರುಚಿ ಉಳಿದವುಗಳಿಗಿಲ್ಲ. ಮಳೆ ನೋಡಲು ಬಂದವನಿಗೆ ಮರಗೆಸುವಿನ ದರ್ಶನವೂ ಆದುದು, ಅದು ಮರುದಿನ ಮೈಸೂರು ತಲುಪಿ ಪತ್ರೊಡೆಯಾಗಿ ಬಟ್ಟಲಿಗೆ ಬಂದುದು ಅಪರೂಪದ ಯೋಗಾಯೋಗ.

ಇಂಥದೇ ಒಂದು ಮಳೆಗಾಲದ ಅತಿಥಿಗಳ ದಂಡು ಚಿಗುರಿ ನಿಂತದ್ದು ಯಾವುದೋ ಗಡ್ಡೆಯದು. ಮೊದಲ ಮಳೆ ಬಂದಾಗಲೇ ಏಕಾಏಕಿ ಭೂಗರ್ಭದಿಂದ ಇಣುಕುತ್ತವೆ. ಇವುಗಳು ಗಮನ ಸೆಳೆಯುವುದು ತಮ್ಮ ಕೆಟ್ಟ ವಾಸನೆಯಿಂದಾಗಿ. ನೋಡಲು ಆಕರ್ಷಕವಾಗಿರುವ ಈ ಹೂವಿನಲ್ಲಿ ಇಂಥ ಕೆಟ್ಟ ವಾಸನೆ ಹೇಗೆ ಬಂತೊ! ನಾಕು ದಿನ ತಮ್ಮ ಚೆಲುವಿನ ಜೊತೆಗೆ ಕೆಟ್ಟ ವಾಸನೆಯನ್ನೂ ಬೀರಿ, ಮಳೆಹೆಚ್ಚಾದ ಹಾಗೆ ಮಾಯವಾಗುತ್ತವೆ. ಆನಂತರ ಇವುಗಳ ಗುರುತೂ ಇರುವುದಿಲ್ಲ.  ವರ್ಷದ ಬಳಿಕ ಮುಂಗಾರು ಮಳೆಬಂದ ಮರುದಿನ ಇವು ಮತ್ತೆ ಪ್ರತ್ಯಕ್ಷ. ಈ ಗಡ್ಡೆಗಳು ಅಂಗಳದ ಮಣ್ಣಿಗೆ ಸೇರಿಕೊಂಡು ಬಿಟ್ಟರೆ ಮಳೆಬಂದಾಗ ಅವು ತಪ್ಪದೇ ಬರುವ ಅತಿಥಿಗಳು!

ಮಳೆಗಾಲ ಬಂದಾಗ ತಪ್ಪದೇ ಮನೆಯಂಗಳದಲ್ಲಿ ಚಿಗುರುವ ಅಣಬೆಗಳು ಚೆಲುವಿನ ಖಣಿಗಳು. ನೋಡುತ್ತೇನೆ, ಚಪ್ಪರದ ಕಂಬಕ್ಕೆ ಕೇಸರಿಯ ಬಣ್ಣದ ಅಣಬೆಗಳು ಹಂತ ಹಂತವಾಗಿ ಚಿಗುರಿವೆ. ಬಿಳಿ ಅಂಚುಗಳಿರುವ ಕೇಸರಿಯ ಬಟ್ಟೆಯನ್ನು ಸಿಂಗರಿಸಿ ಇಟ್ಟ ಹಾಗೆ ಈ ಅಣಬೆಗಳು. ಅಚ್ಚರಿಯೆಂದರೆ ಚಪ್ಪರದ ಒಣಕಂಬದಲ್ಲೂ ಈ ಚೆಲುವಿನ ಸೃಷ್ಟಿಯಾಗುವ ಬಗೆ! ಹಾಗೆ ಮುಂದೆ ಬಂದರೆ ಸೋಗೆಗಳು ಪುಡಿಯಾಗಿ ಕೊಳೆತು ಗೊಬ್ಬರವಾದ ಕಡೆ ಇನ್ನೊಂದು ರೀತಿಯ ಅಣಬೆ ಅರಳಿ ನಿಂತಿವೆ. ಹೊಟೇಲಿನ ಮಾಣಿ ತಂದಿಟ್ಟ ಮೂರು ಮಲ್ಲಿಗೆ ಇಡ್ಲಿಗಳ ಹಾಗೆ ಆಕಾರ, ಬಣ್ಣ ಮಾತ್ರ ಬೇರೆ!

ನಾನು ಚಿಕ್ಕಂದಿನಲ್ಲಿ ನೋಡಿದ್ದು ಮಳೆಗಾಲದಲ್ಲಿ ಮಾತ್ರ ಕಂಗೊಳಿಸುವ ಬೆಟ್ಟದ ಹೂವು, ಯಾವುದೋ ಹುತ್ತದ ಬುಡದಲ್ಲಿ ಅರಳುತ್ತಿತ್ತು. ಈ ಬಾರಿ ಹುಡುಕಿದರೆ ಸಿಗಲೇ ಇಲ್ಲ! ಕಣ್ಣುಬಿಟ್ಟು ನೋಡಿದರೆ ಮಳೆಗಾಲದಲ್ಲಿ ಮನೆಯಂಗಳದಲ್ಲೇ ತೆರೆದುಕೊಳ್ಳುವ  ಜೀವ ವೈವಿಧ್ಯಕ್ಕೆ, ಅವುಗಳ ವಿಸ್ಮಯಕ್ಕೆ ಕೊನೆಯೇ ಇಲ್ಲ! ನೋಡುವ ಕಣ್ಣು ಬೇಕು ಅಷ್ಟೆ!